ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ವರ್ಷಕ್ಕೆ ಸರಾಸರಿ ರೂ. 5,500 ಗಳನ್ನು ಆ ಸಾಲಿನಲ್ಲಿ 10 ತಿಂಗಳ ಕಾಲ ವಾಸಿಸುವವರಿಗೆ ಖರ್ಚು ಮಾಡಲಾಗುತ್ತಿದೆ.

ಗೌರಿಬಿದನೂರು ತಾಲ್ಲೂಕಿನ ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಫ್ಯಾಕ್ಟರಿಯಿಂದ ರೈತರಿಗೆ ಬಾಕಿ ಪಾವತಿ

428(354) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು ಕ್ಷೇತ್ರ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಫ್ಯಾಕ್ಟರಿಗೆ ರೈತರು ಸರಬರಾಜು ಮಾಡಿರುವ ಕಬ್ಬಿಗೆ ಹಣವನ್ನು ನೀಡದೆ ವಿಳಂಬ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಸಾಲದ ಸಂಕಷ್ಟದಲ್ಲಿರುವ ರೈತರು: ಬಳಲಿ, ಜಾತಕ ಪಕ್ಷಿಯಂತೆ ಹಣ ಪಾವತಿಗಾಗಿ ಕಾಯುತ್ತಿರುವುದು ನಿಜವೇ?

ಇ) ಹಾಗಿದ್ದರೆ, ರೈತರಿಂದ ಸರಬರಾಜು ಮಾಡಿಸಿಕೊಂಡ ಸಿರಗುಪ್ಪ ಶುಗರ್ ಫ್ಯಾಕ್ಟರಿಯ ಆಡಳಿತ ವರ್ಗದಿಂದ ಬಾಕಿ ಹಣವನ್ನು ಪಾವತಿ ಮಾಡಿಸಲು ಕೈಗೊಳ್ಳುವ ಕ್ರಮವೇನು?

ಈ) ಈ ಫ್ಯಾಕ್ಟರಿಯಿಂದ ರೈತಾಪಿ ವರ್ಗದವರಿಗೆ ಪಾವತಿಸಬೇಕಾದ ಹಣದ ಮೊತ್ತವೆಷ್ಟು? (ವಿವರ ಒದಗಿಸುವುದು)

ಉ) ಸಾಲದ ಸಂಕಷ್ಟದಲ್ಲಿ ಬಳಲುತ್ತಿರುವ ರೈತರಿಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಬಂದಿದೆ.

ಆ) ಹೌದು ನಿಜ.

ಇ) ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿ. ಗೌರಿಬಿದನೂರು ಇವರಿಂದ ರೈತರಿಗೆ ಬಾಕಿ ಇರುವ ಕಬ್ಬಿನ ಬಾಕಿಯನ್ನು 'ಭೂ ಕಂದಾಯ ಬಾಕಿ' ರೂಪದಲ್ಲಿ ವಸೂಲಿ ಮಾಡಿ ರೈತರಿಗೆ ಪಾವತಿಸಲು ಸಕ್ಕರೆ ನಿರ್ದೇಶಕರು ಕಬ್ಬು ನಿಯಂತ್ರಣ ಆದೇಶದ ನಿಯಮ 3(8)ರ ಅಡಿ ಅಧಿಕಾರ ಚಲಾಯಿಸಿ, ಜಿಲ್ಲಾಧಿಕಾರಿ ಕೋಲಾರ ಇವರಿಗೆ ದಿನಾಂಕ: 26.9.2001ರಲ್ಲಿ ವಸೂಲಾತಿ ಪ್ರಮಾಣ ಪತ್ರ ನೀಡಿರುತ್ತಾರೆ. ಇದರಂತೆ ಜಿಲ್ಲಾಧಿಕಾರಿಗಳು, ಕೋಲಾರ ಕಾರ್ಖಾನೆಯ ಚರ ಮತ್ತು ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿರುತ್ತಾರೆ. ಇದರ ವಿರುದ್ಧ ಕಾರ್ಖಾನೆಯ ಆಡಳಿತ ಮಂಡಳಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂ. 44063:2001ನ್ನು ನ್ಯಾಯಾಲಯವು ದಿನಾಂಕ: 2.12.2002ರಲ್ಲಿ ಇತ್ಯರ್ಥಪಡಿಸಿದೆ, ಸಕ್ಕರೆ ನಿರ್ದೇಶಕರ ದಿನಾಂಕ: 26.9.2001ರ ಆದೇಶವನ್ನು ಎತ್ತಿ ಹಿಡಿದಿರುತ್ತದೆ. ಹಾಗೂ ಸಕ್ಕರೆ ಮಾರಾಟ ಮಾಡಿ, ಬರುವ ಹಣದಲ್ಲಿ ಮೊದಲು ಅಬಕಾರಿ ಸುಂಕ ಪಾವತಿಸಿದ ಉಳಿದ ಮೊತ್ತದಲ್ಲಿ ರೈತರ ಕಬ್ಬು ಬಿಲ್ಲ ಬಾಕಿಗೆ ಪಾವತಿಸಲು ಆದೇಶಿಸಿರುತ್ತೆ. ಕಾರ್ಖಾನೆ ಬಿಐಎಫ್ಆರ್ ಮುಂದೆ ದಾಖಲಿಸಿರುವ ಪ್ರಕರಣ ಸಂ. 371:2001 ಅಂತಿಮವಾಗಿ ತೀರ್ಮಾನವಾಗಬೇಕಾಗಿರುತ್ತದೆ.

ಈ) ಕಾರ್ಖಾನೆಯಿಂದ ರೈತರಿಗೆ ಈ ಕೆಳಕಂಡ ವರ್ಷಗಳ ಬಾಬ್ತು ಕಬ್ಬಿನ ಹಣ ಬಾಕಿ ಇರುತ್ತದೆ.

1.	1999-2000	-	ರೂ. 137.00 ಲಕ್ಷ
2.	2000-2001	-	ರೂ. 286.75 ಲಕ್ಷ
	ಒಟ್ಟು	-	ರೂ. 423.75 ಲಕ್ಷ

ಉ) ಬಿ.ಐ.ಎಸ್.ಆರ್. ಮುಂದೆ ಪ್ರಕರಣ ಬಾಕಿ ಇದ್ದು ಇದು ಇತ್ಯರ್ಥವಾಗಬೇಕಾಗಿದೆ.

ಗೌರಿಬಿದನೂರು ತಾಲ್ಲೂಕು ಮಸೀದಿಗಳಿಗೆ ವಕ್ಫ್ ಮಂಡಳಿಯಿಂದ ಅನುದಾನ ಬಿಡುಗಡೆ

429(357) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿರುವ ಮುಸ್ಲಿಂ ಬಾಂಧವರ ಮಸೀದಿಗಳು, ರುದ್ರಭೂಮಿಗಳು ಶಾದಿಮಹಲ್‌ಗಳ ಸಂಖ್ಯೆ ಎಷ್ಟು? (ಗ್ರಾಮವಾರು ವಿವರ ಒದಗಿಸುವುದು)

ಆ) ಈ ಮುಸ್ಲಿಂ ಬಾಂಧವರ ಮಸೀದಿಗಳು ರುದ್ರಭೂಮಿಗಳ, ಶಾದಿಮಹಲ್‌ಗಳ ಜೀರ್ಣೋದ್ಧಾರ ಕಾರ್ಯಕ್ಕೆ 3 ವರ್ಷಗಳ ಹಿಂದಿನಿಂದಲೂ ವಕ್ಫ್ ಮಂಡಳಿಯ ವತಿಯಿಂದ ಮಂಜೂರು ಮಾಡಿರುವ ಅನುದಾನ ಎಷ್ಟು? (ಗ್ರಾಮವಾರು ವಿವರ ಒದಗಿಸುವುದು)

ಇ) ಯಾವ ಯಾವ ಮಸೀದಿಗಳ, ರುದ್ರ ಭೂಮಿಗಳ, ಶಾದಿಮಹಲ್‌ಗಳ ಜೀರ್ಣೋದ್ಧಾರ ಕಾರ್ಯಕ್ಕೆ ಎಷ್ಟೆಷ್ಟು ಅನುದಾನವನ್ನು ವ್ಯಯ ಮಾಡಲಾಗಿದೆ (ಗ್ರಾಮವಾರು ವಿವರ ಒದಗಿಸುವುದು)

ಈ) ವಕ್ಫ್ ಮಂಡಳಿಯ ವತಿಯಿಂದ ನಿಗಧಿತ ಸಮಯಕ್ಕೆ ಅನುದಾನ ಬಿಡುಗಡೆಯಾಗದೇ ಅರ್ಧಕ್ಕೆ ನಿಂತಿರುವ ಮಸೀದಿಗಳ ಕಟ್ಟಡಗಳ ಸಂಖ್ಯೆ ಎಷ್ಟು? ಇವುಗಳಿಗೆ ಸಕಾಲದಲ್ಲಿ ಬಿಡುಗಡೆ ಮಾಡಿ ಕಟ್ಟಡಗಳ ಕಾಮಗಾರಿಯನ್ನು ಪೂರೈಸಿಕೊಡುವುದು ಯಾವಾಗ.

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 45 ಮಸೀದಿಗಳು, 82 ರುದ್ರಭೂಮಿಗಳು (ಖಬ್ರ ಸ್ಥಾನ) ಇದ್ದು, ಶಾದಿ ಮಹಲ್‌ಗಳು ಇರುವುದಿಲ್ಲ. (ಗ್ರಾಮವಾರು ವಿವರ ಲಗತ್ತಿಸಿದೆ)

ಆ) ವಕ್ಫ್ ಸಂಸ್ಥೆಗಳಿಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

1999-2000:	1 ಮಸೀದಿ ರೂ. 10,000-00
2000-2001:	8 ಮಸೀದಿಗಳು ರೂ. 1,60,000
	3 ಖಬ್ರ ಸ್ಥಾನ ರೂ. 85,000
2001-2002:	3 ಮಸೀದಿಗಳು ರೂ. 60,000

(ಗ್ರಾಮವಾರು ವಿವರ ಲಗತ್ತಿಸಿದೆ)

ಇ) ಮೇಲ್ಕಂಡಂತೆ:

ಈ) ವಕ್ಫ್ ಮಂಡಳಿಯಿಂದ ಅನುದಾನ ಬಿಡುಗಡೆಯಾಗದೇ ಮಸೀದಿ ಕಟ್ಟಡ ಕಾರ್ಯ ಅರ್ಧಕ್ಕೆ ನಿಂತಿರುವ ಯಾವುದೇ ಪ್ರಕರಣ ಇರುವುದಿಲ್ಲ.